**ದಿನಾಂಕಃ 22-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಸಿ.ಎನ್.ಪಿ. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಮಾಣ ಪತ್ರವನ್ನು ಬರೆಯಲು ವಕೀಲರು ಮಾಹಿತಿಯನ್ನು ಒದಗಿಸಿರುತ್ತಾರೆ. ದಾವಾ ಸ್ವತ್ತಿನ ಆರ್.ಟಿ.ಸಿ.ಯನ್ನು ನಾನು ನೋಡಿರುತ್ತೇನೆ. ಸದರಿ ಆರ್.ಟಿ.ಸಿ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ದಾವಾ ಸ್ವತ್ತಿನ ಪಹಣಿ ಪತ್ರಿಕೆಯ ಕಲಂ.ನಂ.11 ನ್ನು ನೋಡಿರುತ್ತೇನೆ. ಸದರಿ ಕಾಲಂ ನಲ್ಲಿ ಸೂಡಂಬಿಯ ಎಸ್.ಬಿ.ಐ ಬ್ಯಾಂಕಿನ ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ. ಅದೇರೀತಿ ಸದರಿ ಕಾಲಂ ನಲ್ಲಿ ಕಬ್ಬೂರಿನ ಕಾರ್ಪೋರೇಶನ್ ಬ್ಯಾಂಕಿನ ರೂ.7 ಲಕ್ಷ ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ. ಅದೇರೀತಿ ಸದರಿ ಕಾಲಂ ನಲ್ಲಿ ಹಿರೇಹಳ್ಳಿಯ ವಿಜಯಾ ಬ್ಯಾಂಕಿನ ರೂ.ಎರಡೂವರೆ ಲಕ್ಷ ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ. ಅದೇರೀತಿ ಸದರಿ ಕಾಲಂ ನಲ್ಲಿ ಕಾರ್ಪೋರೇಶನ್ ಬ್ಯಾಂಕಿನ ರೂ.5,13,000/- ಸಾಲ ಇದೆ ಎಂದು ನಮೂದು ಇದೆ ಎಂದರೆ ಸರಿ.

02. ದಿನಾಂಕಃ 02.09.2020 ರ ಪೂರ್ವದಲ್ಲಿ ದಾವಾ ಸ್ವತ್ತಿನ ಮೇಲೆ ಈ ಮೇಲೆ ಹೇಳಿದ ಸಾಲ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲೆ ಹೇಳಿದ ಬ್ಯಾಂಕಿನವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಲು ತೊಂದರೆ ಇರಲಿಲ್ಲ. ಪ್ರತಿವಾದಿ ನನಗೆ 5-6 ವರ್ಷಗಳಿಂದ ಪರಿಚಯ. ಆತ ದೂಳಿಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದಾನೆ. ಸದರಿ ಗ್ರಾಮದಲ್ಲಿ ಆತ ಕುಟುಂಬ ಸಮೇತ ವಾಸವಾಗಿದ್ದಾನೆ. ಆತನಿಗೆ 2 ಜನ ಹೆಂಡತಿಯರು ಆ ಪೈಕಿ ಓರ್ವಳು ತೀರಿಕೊಂಡಿದ್ದಾಳೆ.

03. ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಪತ್ರವನ್ನು ಮಾಡಿಕೊಳ್ಳುವ ಮೊದಲು ಸದರಿ ಸ್ವತ್ತಿನ ಮಾಲೀಕರು ಯಾರು ಎಂದು ಚೌಕಾಸಿ ಮಾಡಿರುತ್ತೇನೆ. ಆ ಬಗ್ಗೆ ನಾನು ಕೆ.ಎಸ್.ಬಣಕಾರ ಮತ್ತು ವೈ.ಎಸ್.ಪಾಟೀಲ ಎಂಬುವವರನ್ನು ಚೌಕಾಸಿ ಮಾಡಿರುತ್ತೇನೆ. ಆಗ ನನಗೆ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕ ಎಂದು ಗೊತ್ತಾಯಿತು. ಕರಾರು ಪತ್ರ ಮಾಡುವ ಮೊದಲು ಋಣಭಾರ ಪ್ರಮಾಣ ಪತ್ರವನ್ನು ನಾನು

ತೆಗೆಯಿಸಿರಲಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರವನ್ನು ತೆಗೆಯಿಸಲು ನನಗೆ ತೊಂದರೆ ಇರಲಿಲ್ಲ.

04. ಸುಮಾರು 60 ವರ್ಷಗಳ ನಂತರ ಪ್ರತಿಯೊಬ್ಬ ವ್ಯಕ್ತಿಗೆ ಅರಳು-ಮರಳು, ದೃಷ್ಟಿ ದೋಷ ಸಾಮಾನ್ಯ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಪ್ರತಿಯೊಬ್ಬರ ಆರೋಗ್ಯದ ಮೇಲೆ ಅವಲಂಬಿತವಾಗಿರುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪ್ರತಿವಾದಿ ಆರೋಗ್ಯವಾಗಿದ್ದ ಎನ್ನುತ್ತಾರೆ. ದಿನಾಂಕಃ 02.09.2020 ರಂದು ಪ್ರತಿವಾದಿಗೆ 80 ವಯಸ್ಸು ಇತ್ತು ಎಂದರೆ ಸಾಕ್ಷಿ 70-75 ವರ್ಷ ವಯಸ್ಸು ಇತ್ತು ಎನ್ನುತ್ತಾರೆ. ದಿನಾಂಕಃ 01.05.2020 ರಂದು ಪ್ರತಿವಾದಿಗೆ ರೂ.1,80,000/- ನೀಡಲಾಗಿದೆ ಎಂದು ಬರೆದಿದ್ದು ಸದರಿ ಹಣವನ್ನು ನಾನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ಚೆಕ್ ಅಥವಾ ಆರ್.ಟಿ.ಜಿ.ಎಸ್. ಮೂಲಕ ನೀಡಲು ತೊಂದರೆ ಇರಲಿಲ್ಲ. ಸದರಿ ಸಮಯದಲ್ಲಿ ಕೆ.ಎಸ್.ಬಣಕಾರ ಮತ್ತು ವೈ.ಎಸ್.ಪಾಟೀಲ ಹಿರಿಯರು ಇದ್ದರು. ಸದರಿ ರೂಪಾಯಿ 1,80,000/- ಹಣದ ಮುಖಬೆಲೆ ನನಗೆ ಗೊತ್ತಿಲ್ಲ. ಸದರಿ ಹಣವನ್ನು ನಾನು ನನ್ನ ಪರಿಚಯಸ್ಥರಿಂದ ಪಡೆದು ಹಾಗೂ ನನ್ನ ಬಳಿ ಇದ್ದ ಸ್ವಲ್ಪ ಹಣ ಸೇರಿಸಿ ನೀಡಿದ್ದೆ. ನಾನು ನನ್ನ ಅಣ್ಣ ಶಂಕ್ರಯ್ಯರವರಿಂದ ಸದರಿ ಹಣವನ್ನು ಕೈಗಡವಾಗಿ ಪಡೆದಿದ್ದೆ. ಆ ಬಗ್ಗೆ ಕೈಗಡ ಪತ್ರವನ್ನು ಮಾಡಿಕೊಂಡಿರಲಿಲ್ಲ. ಸದರಿ ಹಣವನ್ನು ಪ್ರತಿವಾದಿಗೆ ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸದರಿ ಹಣವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ.

05. ದಿನಾಂಕಃ18.05.2020 ರಂದು ನಾನು ಪ್ರತಿವಾದಿಗೆ ರೂ.1,20,000/- ಗಳನ್ನು ನೀಡಿರುತ್ತೇನೆ ಎಂದು ಬರೆಯಿಸಿರುತ್ತೇನೆ. ಸದರಿ ಹಣದ ಮುಖಬೆಲೆ ನನಗೆ ಗೊತ್ತಿಲ್ಲ. ಸದರಿ ಹಣ ನನ್ನ ಬಳಿ ನನ್ನ ಮನೆಯಲ್ಲಿ ಇತ್ತು ಅದನ್ನು ನೀಡಿದ್ದೆ. ಸದರಿ ಹಣವನ್ನು ಪ್ರತಿವಾದಿಗೆ ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸದರಿ ಹಣವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಹಣ ನೀಡುವ ಕಾಲಕ್ಕೆ ದೂಳಿಕೊಪ್ಪದ ಗ್ರಾಮಸ್ಥರು ಇದ್ದರು.

06. ದಿನಾಂಕ 16.05.2020 ರಂದು ರೂ.5,00,000/- ಗಳನ್ನು ನಾನು ಪ್ರತಿವಾದಿಗೆ ನೀಡಿರುತ್ತೇನೆ ಎಂದು ಬರೆಯಿಸಿದ್ದು ಸದರಿ ಹಣವನ್ನು ನಾನು ಬ್ಯಾಂಕಿನಿಂದ ಹಾಗೂ ನನ್ನ ಬಳಿ ಇದ್ದ ಸ್ವಲ್ಪ ಹಣವನ್ನು ಹೊಂದಿಸಿ ಕೊಟ್ಟಿರುತ್ತೇನೆ. ಹಾಗೂ ನನ್ನ ಪರಿಚಯಸ್ಥರ ಬಳಿ ಇದ್ದ ಸ್ವಲ್ಪ ಹಣವನ್ನು ಪಡೆದಿದ್ದೆ. ನಾನು ಬ್ಯಾಂಕಿನಿಂದ ಎಷ್ಟು ಹಣವನ್ನು ಡ್ರಾ ಮಾಡಿದ್ದೆ ಎಂದು ಹೇಳಲು ಬರುವುದಿಲ್ಲ. ನಾನು ಸದರಿ ಹಣವನ್ನು ಯಾವ ದಿನಾಂಕದಂದು ಬ್ಯಾಂಕ್ ನಿಂದ ಪಡೆದಿದ್ದೆ ಎಂದು ಪಾಸ್ ಪುಸ್ತಕ ನೋಡಿ ಹೇಳಬಹದು. ಸದರಿ ಪಾಸ್ ಪುಸ್ತಕವನ್ನು ನಾನು ಹಾಜರು ಪಡಿಸಬಲ್ಲೇ. ರೂ.20,000/- ಕ್ಕಿಂತ ಹೆಚ್ಚಿನ ಹಣವನ್ನು ನೀಡುವುದಾದರೆ ಚೆಕ್ ಮೂಲಕ ನೀಡಬೇಕು ಎಂದು ನಿಯಮ ಇದ್ದರೂ ಸಹ ನಾನು ಸಂಬಂಧಿಸಿದ ಉಪನೊಂದಾಣಾಧಿಕಾರಿಯವ ರೊಂದಿಗೆ ಶಾಮಿಲಾಗಿ ಸದರಿ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ ಎಂದು ಸುಳ್ಳು ಬರೆಯಿಸಿ ಶೂನ್ಯ ಒಪ್ಪಂದವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

07. ದಿನಾಂಕಃ 02.09.2020 ರಂದು ಪ್ರತಿವಾದಿಗೆ ಸಂದ್ಯಾಸುರಕ್ಷಾ ಯೋಜನೆಯನ್ನು ಅಪಡೇಟ್ ಮಾಡಿಸುವ ಉದ್ದೇಶದಿಂದ ಆತನನ್ನು ಉಪನೊಂದಾಣಾಧಿಕಾರಿಯವರ ಕಚೇರಿಗೆ ಕರೆದುಕೊಂಡು ಹೋಗಿ ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕರಾರಿನ ಬಗ್ಗೆ ಪ್ರತಿವಾದಿಗೆ ಅರಿವು ಇರಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 63/2015 ರಲ್ಲಿ ಆದ ಆದೇಶದನ್ವಯ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕನಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ರಾಜೀ ಡಿಕ್ರಿಯ ಪ್ರಕಾರ ನಾಗಮ್ಮ ಮಾಲತೇಶಪ್ಪ ಹಾಲಗೊಂಡರ ದಾವಾ ಸ್ವತ್ತೀನ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಾಗಮ್ಮ ಮಾಲತೇಶಪ್ಪ ಹಾಲಗೊಂಡರ ದಾವಾ ಸ್ವತ್ತಿನ ಮಾಲೀಕರು ಎಂದು ನನಗೆ ಗೊತ್ತಾಗಿಲ್ಲ. ಹಾಗೂ ಆ ಬಗ್ಗೆ ನನಗೆ ಗೊತ್ತಿದ್ದರೂ ಸಹ ದಾವಾ ಸ್ವತ್ತಿನ ಮಾಲೀಕನಲ್ಲದ ಪ್ರತಿವಾದಿಯೊಂದಿಗೆ ನಾನು ಶೂನ್ಯ ಒಪ್ಪಂದ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 02.09.2020 ರ ಕರಾರಿನಡಿಯಲ್ಲಿ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.